ಅ) ರಾಜ್ಯದಲ್ಲಿ ದಿನಾಂಕ:1-1-1995ರಿಂದ 31-12-1996ರವರೆಗೆ ಮಂಜೂರು ಮಾಡಲಾಗಿರುವ ಹೊಸ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) 1997 ಮಾರ್ಚ್ ಅಂತ್ಯದೊಳಗೆ ಇನ್ನು ಎಷ್ಟು ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು?

**ಶ್ರೀ ಆರ್. ಕೃಷ್ಣಪ್ಪ. (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)**

ಅ) 100

ಪ್ರತಿ ಜಿಲ್ಲೆಗೆ 5ರಂತೆ ಪಂಚಾಯ್ತಿ ಗ್ರಂಥಾಲಯಗಳನ್ನು ರಾಜ್ಯದ 20 ಜಿಲ್ಲೆಗಳಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಿದೆ.

ಆ) ಹಣಕಾಸಿನ ಕೊರತೆಯಿಂದ 1997 ಮಾರ್ಚ್ ಅಂತ್ಯದೊಳಗೆ ಯಾವದೇ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆಯನ್ನು ಹಮ್ಮಿಕೊಂಡಿರುವುದಿಲ್ಲ.

**ಗ್ರಾಮ ಪಂಚಾಯತಿಗಳು ಕಂದಾಯಗಳನ್ನು ಕಟ್ಟಾಯಿಸಲು ಇರುವ ತೊಡಕುಗಳು.**

**311 (704) ಶ್ರೀ ಅಶ್ವತ್ಥ್‌ನಾರಾಯಣ ರೆಡ್ಡಿ (ವರ್ತೂರು):**

ಮಾನ್ಯ ಗ್ರಾಮೋಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿಗಳು ಶೇ. 80ರಷ್ಟು ಬಾಡಿಗೆ ಬೆಲೆ ಆಧ್ರದ ಮೇಲೆ ಕಂದಾಯ ನಿಗಧಿಪಡಿಸುವಾಗ ಬಹಳಷ್ಟು ಅಕ್ರಮಗಳು ಅವ್ಯವಹಾರಗಳಾಗಿ ಸಾರ್ವಜನಿಕರಿಗೆ ಗೊಂದಲವಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ;

ಆ) ಇದಕ್ಕೆ ಬದಲಾಗಿ ಮನೆಯ ವರ್ಗಾವಾರು ಚದುರ ಮೀಟರಿಗೆ ಕಂದಾಯ ನಿಗದಿ ಮಾಡಲು ಕಾನೂನು ತಿದ್ದುಪಡಿ ಮಾಡಲಾಗುತ್ತದೆಯೇ;

ಇ) ಪಂಚಾಯಿತಿಗಳಲ್ಲಿರುವ ಗ್ರಾಮ ರಾಣಾ ಜಮೀನುಗಳನ್ನು ಸರ್ವೆಕ್ಷಣೆ ಮಾಡಿಸಿ ಕಾನೇಷುಮಾರಿ ನಂಬರುಗಳನ್ನು ನಮೂದಿಸಿ ಅಳತೆಗಳನ್ನು ಸೂಚಿಸುವ ನಕಾಶೆ ಮಾಡುವುದು ಸರ್ಕಾರದ ಯೋಜನೆಯಲ್ಲಿ ಇದೆಯೇ;

ಈ) ಇಂತಹ ನಕಾಶೆ ಇಲ್ಲದ ಪರಿಸ್ಥಿತಿಯಲ್ಲಿ ಸಮಸ್ಯೆಗಳು ತಗಾದೆಗಳು ನ್ಯಾಯಾಲಯದಲ್ಲಿ ಮೊಕದ್ದಮೆಗಳು ಹಾಕಿ ಗ್ರಾಮಾಂತರ ಜನತೆಗೆ ಗೋಜಾಗಿರುವುದು (ತೊಂದರೆ) ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಉ) ಈ ಬಗ್ಗೆ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.)**

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 199ರಲ್ಲಿ ನಮೂದಿಸಿರುವ IV ನೇ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವಂತೆ ಗ್ರಾಮ ಪಂಚಾಯತಿಗಳು ಕಟ್ಟಡಗಳ ವಾರ್ಷಿಕ ಬಾಡಿಗೆ ಮೌಲ್ಯದ ಶೇ. 10 ರಷ್ಟು ಗರಿಷ್ಟ ತೆರಿಗೆಯನ್ನು ನಿಗದಿಪಡಿಸಲು ಅವಕಾಶವಿದೆ.

ಸದರಿ ತೆರಿಗೆಯನ್ನು ನಿಗದಿಪಡಿಸುವಾಗ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994ರಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಗ್ರಾಮ ಪಂಚಾಯತಿಗಳು ಪಾಲಿಸಿ ಅನಂತರ ನಿರ್ದಿಷ್ಟಪಡಿಸಬೇಕಾಗುತ್ತದೆ.

ಈ ವಿಷಯದ ಬಗ್ಗೆ ಅಕ್ರಮಗಳು, ಅವ್ಯವಹಾರಗಳು ಅಥವಾ ಸಾರ್ವಜನಿಕರಿಗೆ ಗೊಂದಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕ ಪತ್ರಗಳು ಮತ್ತು ಬಜೆಟ್) ನಿಯಮಗಳು,1995ರ 64ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತಿ ಗ್ರಾಮ ಪಂಚಾಯಿತಿಯು ಕಾಲಕಾಲಕ್ಕೆ ಅರ್ಜಿಸಿದ ಅಥವಾ ವಿಲೇ ಮಾಡಿದ ಭೂಮಿಗಳ ಮತ್ತು ಕಟ್ಟಡಗಳಂತಹ ಸ್ಥಿರಸೊತ್ತುಗಳ ವಿವರಗಳನ್ನು 30ನೇ ಸಂಖ್ಯೆಯ ನಮೂನೆಯಲ್ಲಿರುವ ಸ್ಥಿರ ಸೊತ್ತುಗಳ ವಹಿಯಲ್ಲಿ ದಾಖಲು ಮಾಡತಕ್ಕದ್ದೆಂದು ನಿರ್ದಿಷ್ಟ ಪಡಿಸಲಾಗಿದೆ. ಅದರಂತೆ ಗ್ರಾಮ ಪಂಚಾಯತಿಗಳ ಸ್ವಂತ ಆಸ್ತಿಗಳಾದ ಗ್ರಾಮರಾಣ, ಪಂಚಾಯತಿ ಕಟ್ಟಡ, ಶಾಲಾ ಕಟ್ಟಡ ಇತ್ಯಾದಿ ಸೊತ್ತುಗಳನ್ನು ದಾಖಲಿಸುವುದಲ್ಲದೆ, ಗ್ರಾಮದಲ್ಲಿನ ಸಾರ್ವಜನಿಕರ ಸೊತ್ತುಗಳಾದ ಮಸತಿ, ಮನೆ, ನಿವಾಸ, ಬಯಲು ಜಾಗ ಇತ್ಯಾದಿಗಳನ್ನು ವಿವರವಾಗಿ ದಾಖಲಿಸಲು ಗ್ರಾಮ ಪಂಚಾಯತಿಗಳು ನಿರ್ಧಿಷ್ಟ ಕಾಲದೊಳಗೆ ಪೂರ್ಣಗೊಳಿಸುವಂತೆ ಈ ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಲು ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುವಂತೆ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 27-8-96ರಂದು ಸೂಚನೆಗಳನ್ನು ನೀಡಲಾಗಿದೆ.

**ಕೃಷ್ಣರಾಜಪುರದ ಆಸ್ಪತ್ರೆ ಕಟ್ಟಡ ನಿರ್ಮಾಣದ ಬಗ್ಗೆ.**

**312 (708) ಶ್ರೀ ಅಶ್ವತ್ಥ್‌ನಾರಾಯಣ ರೆಡ್ಡಿ (ವರ್ತೂರು):**

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ದಿ:1-1-95 ರಿಂದ 31-12-96 ರವರೆವಿಗೆ ಆರೋಗ್ಯ ಮತ್ತು ಕು.ಕ. ಇಲಾಖೆಯಿಂದ ಪ್ರಾ. ಆ. ಘಟಕಗಳನ್ನು, ಪ್ರಾ.ಆ. ಕೇಂದ್ರಗಳನ್ನು ಮತ್ತು ಹೆರಿಗೆ ಆಸ್ಪತ್ರೆಗಳನ್ನು ಎಷ್ಟು ಮಂಜೂರು ಮಾಡಲಾಗಿರುತ್ತದೆ; (ಜಿಲ್ಲಾವಾರು ಮಾಹಿತಿ ನೀಡುವುದು);

2) 1991-92ನೇ ಸಾಲಿನಲ್ಲಿ ವರ್ತೂರು ವಿಧಾನಸಭೆ ಕ್ಷೇತ್ರದ ಕೃಷ್ಣರಾಜಪುರ ಗ್ರಾಮದಲ್ಲಿ 100 ಹಾಸಿಗೆಯ ಆಸ್ಪತ್ರೆ ಕಟ್ಟಡ ಪ್ರಾರಂಭವಾಗಿದ್ದು, ನಂತರ ಕಾಮಗಾರಿ ಕೆಲಸ ನಿಂತಿರುವುದಕ್ಕೆ ಕಾರಣವೇನು? ಈ ಕಟ್ಟಡವನ್ನು ತ್ವರಿತವಾಗಿ ಪೂರ್ಣಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ? ಎಷ್ಟು ದಿನಗಳಲ್ಲಿ ಕಟ್ಟಡವನ್ನು ಪೂರೈಸಲಾಗುವುದು;

ಡಾ|| ಹೆಚ್.ಸಿ.ಮಹದೇವಪ್ಪ. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.)